**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,ಹೊಸದುರ್ಗ.**

**ಅಸಲು ದಾವಾ ಸಂಖ್ಯೆ.27/2019**
**ಪ್ರ.ಸಾ-1**

**ಸಾಕ್ಷಿಗೆ ದಿನಾಂಕ:16-9-2022 ರಂದು ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು ಶ್ರೀಮತಿ ಸಿ ಜೆ ಡಿ ವಾದಿಯ ಪರ ವಕೀಲರಿಂದ**

1. ವಾದಿಗೆ ನಿಪಿ-1 ರಂತೆ ಜಮೀನು ಮಂಜೂರಾಗಿದೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಆದೇಶ ಸಂಖ್ಯೆ ಕೂಡ ನಮೂದಾಗಿದೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ದಾವಾ ಜಮೀನು ವಾದಿಗೆ ಮಂಜೂರಾಗಿದೆ ಎಂದು ನಮೂದು ಇದೆ ಎಂದರೆ ಸುಳ್ಳು. ಸಾಕ್ಷಿಯು ಮುಂದುವರೆದು ಸದರಿ ದಾಖಲಾತಿಯನ್ನು ಸುಳ್ಳಾಗಿ ಸೃಷ್ಟಿಸಲಾಗಿದೆ ಎಂದು ನುಡಿಯುವರು ನಿಪಿ-1 ರಲ್ಲಿ ಚಕ್ಕುಬಂದಿ ಕೂಡ ನಮೂದಾಗಿ ಎಂದರೆ ಸರಿಯಲ್ಲ ಎಂದು ನುಡಿಯುವರು.

2. ನಿಪಿ-2 ರಂತೆ ಜಮೀನಿನ ಖಾತೆಯನ್ನು ವಾದಿಯ ಹೆಸರಿಗೆ ಮಂಜೂರು ಮಾಡಲು ಆದೇಶವಾಗಿದೆ ಎಂದರೆ ಸರಿಯಲ್ಲ. ನಿಪಿ-1 ಮತ್ತು 2 ರಂತೆ 1991-92 ರಿಂದ ವಾದಿಯ ಹೆಸರಿಗೆ ಜಮೀನಿನ ಪಹಣಿ ಪತ್ರಿಕೆಯೂ ಕೂಡ ಬಂದಿರುತ್ತದೆ ಎಂದರೆ ಸರಿಯಲ್ಲ. ನಿಪಿ-4 ರಂತೆ ವಾದಿಯ ಅಣ್ಣ ತಮ್ಮಂದಿರು ಜಮೀನನ್ನು ಪಾಲು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

3. ನಿಪಿ-6 ರಂತೆ ಜಮೀನು ವರ್ಗಾವಣೆಯಾಗಿರುವ ಮತ್ತು ಮಂಜೂರಾಗಿರುವ ಬಗ್ಗೆ ವರದಿ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ನಿಪಿ-6 ರಲಲ್ಲಿ 11 ಮತ್ತು 12 ನೇ ಜಮೀನಿನ ಸಾಗವಳಿ ಮತ್ತು ಮಾರಾಟದ ಬಗ್ಗೆಕೂಡ ನಮೂದು ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ದಾಖಲಾತಿಯಲ್ಲಿ 7 ನೇ ಪ್ರತಿವಾದಿಯ ಬಗ್ಗೆಯೂ ಕೂಡ ನಮೂದು ಇದೆ

ಎಂದರೆ ಸರಿಯಲ್ಲ. ದಾವಾ ಜಮೀನಿನ ಗಣಕೀಕೃತ ಪಹಣಿ ಪತ್ರಿಕೆಗಳು ಕೂಡ ವಾದಿ ಹೆಸರಿಗೆ ಬಂದಿವೆ ಎಂದರೆ ಸರಿಯಲ್ಲ.

4. ನಿಪಿ-8 ರಂತೆ ವಾದಿಯು ನನ್ನ ವಿರುದ್ದ ಒಂದು ದಾವೆ ಹೂಡಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ದಾವೆಯನ್ನು ವಾದಿಯೇ ಹಿಂಪಡೆದಿರುತ್ತಾರೆ ಎಂದು ನುಡಿಯುವರು. ಸದರಿ ದಾವೆಯಲ್ಲಿನಾನು ತಕರಾರು ಸಲ್ಲಿಸಿದ್ದೇನೆ. ಈ ದಾವೆಯಲ್ಲೂ ಕೂಡ ಪ್ರತಿವಾದ ಪತ್ರ ಸಲ್ಲಿಸಿ ಆಸ್ತಿಯ ಚಕ್ಕುಬಂದಿಯನ್ನು ತೋರಿಸಿದ್ದೇನೆ. ನನ್ನ ಪ್ರತಿವಾದ ಪತ್ರದ ಪ್ರಕಾರ ಪಾರ್ವತಮ್ಮ ಗಂಡ ತಿಮ್ಮಪ್ಪರವರ ಜಮೀನು ಪಶ್ಚಿಮಕ್ಕೆ ಇದ್ದು ಸದರಿ ಜಮೀನಿನ ಹಳೆ ಸರ್ವೆ ನಂ.12 ಮತ್ತು ಹೊಸ ಸರ್ವೆ ನಂ.73.

5. ನಿಪಿ-13 ರಲ್ಲಿ ಸರ್ಕಾರದವರು ಜಮೀನನ್ನು ಸ್ವಾಧೀನಪಡಿಸಿಕೊಂಡಿರುವ ಬಗ್ಗೆ ನಮೂದು ಇದ್ದು ಅದರಲ್ಲಿ ಆಸ್ತಿಯ ವಿವರಗಳು ಇವೆ ಎಂದರೆ ಸರಿ. 18 ನೇ ಕ್ರಮ ಸಂಖ್ಯೆಯಲ್ಲಿ ವಾದಿಯ ಹೆಸರು ಇದೆಯೇ ಎಂದರೆ ಸರಿ. ಸದರಿ ದಾಖಲಾತಿಗಳಲ್ಲಿ ಚಕ್ಕುಬಂದಿ ಇದೆ ಎಂದರೆ ಅದು ಸರಿಯಾದ ಚಕ್ಕುಬಂದಿ ಅಲ್ಲ ಎಂದು ನುಡಿಯುವರು. ಸದರಿ ದಾಖಲಾತಿಯಲ್ಲಿ ಕೂಡ ದಾವಾ ಆಸ್ತಿ ಬಗ್ಗೆ ವರದಿ ಇದೆ ಎಂದರೆ ಸರಿಯಲ್ಲ.

6. ನಿಪಿ-23 ರಲ್ಲಿಯೂ ಕೂಡ ಅದೇ ರೀತಿಯ ವಿವರಗಳು ಇವೆ ಎಂದರೆ ಸರಿಯಲ್ಲ. ವಾದಿಯು ದಾವಾ ಆಸ್ತಿಯ ಮೇಲೆ ಸಾಲ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-14 ರಂತೆ ವಾದಿಯು ಸಾಲ ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-15 ರಲ್ಲಿಯೂ ಕೂಡ ಆಸ್ತಿಯ ವಿವರಗಳನ್ನು ವರದಿ ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-15 ರಲ್ಲಿ ಆಸ್ತಿ ಸ್ವಾಧೀನ ಪಡಿಸಿಕೊಂಡಿರುವ ಬಗ್ಗೆ ವರದಿ ಇದೆ ಎಂದರೆ ಸರಿ. ಸದರಿ ದಾಖಲಾತಿಯಲ್ಲಿನ ಕ್ರಮ ಸಂಖ್ಯೆ 40 ರಲ್ಲಿನ ಅಂಶಗಳು ಸರಿಯಲ್ಲ. ಕ್ರಮ ಸಂಖ್ಯೆ 41 ನೇ

ಆಸ್ತಿಯಲ್ಲಿನ ವಿವರಗಳು ಸುಳ್ಳು. ಸದರಿ ಕ್ರಮ ಸಂಖ್ಯೆಯ ಆಸ್ತಿಯ ಚಕ್ಕುಬಂದಿಯೂ ಕೂಡ ನಮೂದು ಇದೆ ಎಂದರೆ ಸರಿಯಲ್ಲ.

7. ನಿಪಿ-16 ರಲ್ಲಿಯೂ ಆಸ್ತಿಯ ವಿವರಗಳು ನಮೂದಾಗಿದೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ವಕೀಲರು ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಅದೆ. ನನ್ನ ಸಮಕ್ಷಮ

**ಪ್ರಧಾನ ಸಿವ್ಹಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.**